**ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಿಂದ.**

7. 1 ರಿಂದ 3 ನೇ ಪ್ರತಿವಾದಿಗಳ ತಂದೆಯಾದ ಹನುಮಪ್ಪನು ಬಾವಿ ಲಿಂಗಪ್ಪ ಮತ್ತು ಗಂಗಮ್ಮ ದಂಪತಿಗಳ ಏಕೈಕ ವಾರಸುದಾರನೆಂದರೆ ಅಲ್ಲ, ನಾವೇ ವಾರಸುದಾರರು. ಬಾವಿ ಲಿಂಗಪ್ಪ ಮತ್ತು ಗಂಗಮ್ಮನಿಗೆ ಯಾವುದೇ ಸಂತಾನವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಬಾವಿ ನಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಇವರ ವಾರಸುದಾರರಿರುತ್ತೇವೆ. ಗಂಗಮ್ಮನಿಗೂ ನಮಗೂ ಯಾವುದೇ ಸಂಬಂಧವಿರುವುದಿಲ್ಲ. ಬಾವಿ ನಿಂಗಪ್ಪ ಎಂಬ ವ್ಯಕ್ತಿ ಅಸ್ತಿತ್ವದಲ್ಲಿ ಇರಲೇ ಇಲ್ಲ ಎಂದರೆ ಸಾಕ್ಷಿಯು ಬಾವಿ ಲಿಂಗಪ್ಪನ ತಂದೆ ದೊಡ್ಡನಿಂಗಪ್ಪ ಅಸ್ತಿತ್ವದಲ್ಲಿ ಇದ್ದರು ಎನ್ನುತ್ತಾರೆ. ಬಾವಿ ಲಿಂಗಪ್ಪನ ತಂದೆ ದೊಡ್ಡನಿಂಗಪ್ಪ ಎಂದು ರುಜುವಾತುಪಡಿಸುವ ದಾಖಲೆಯನ್ನು ಹಾಜರು ಮಾಡಿದ್ದೇನೆ. ವಂಶವೃಕ್ಷ ಮತ್ತು ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ. ನಾನು ಅಂತಹ ದಾಖಲೆಗಳನ್ನು ಹಾಜರು ಮಾಡದೇ ಇದ್ದರೂ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಂಗಪ್ಪ ಮತ್ತು ಗಂಗಮ್ಮ ತೀರಿಕೊಂಡ ನಂತರ ಹನುಮಪ್ಪನ ಹೆಸರಿಗೆ ಮ್ಯುಟೇಶನ್ ನಂ. 54/1997-98 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಮೋಸ ಮಾಡಿ ಮಾಡಿಸಿಕೊಂಡಿದ್ದಾರೆ. ನಾನು ಹೇಳುತ್ತೇನೆ, ನಾವು 1997-98 ರಿಂದಲೂ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಎಂ.ಆರ್. ನಂ. 54/1997-98 ನ್ನು 2014 ನೇ ಇಸವಿ ವರೆಗೆ ವಾದಿಗಳಾದ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ನನಗೆ ಅದರ ಬಗ್ಗೆ ದ್ಯಾಸವಿಲ್ಲ. ಈ ಜಮೀನು ಮ್ಯುಟೇಶನ್ ಮೂಲಕ ಬಾವಿ ಹರವಿ ಹನುಮಪ್ಪನು ದತ್ತು ಮಗನೆಂದು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರಿಂದ ಸದರಿ ಹನುಮಪ್ಪನ ಸ್ವಾಧೀನದಲ್ಲೇ ಇತ್ತು ಎಂದರೆ ಸರಿಯಲ್ಲ. ಎ.ಸಿ ಯವರ ನ್ಯಾಯಾಲಯದಲ್ಲಿ ನಾವು ಎಂ.ಆರ್. ನಂ. 54/1997-98 ನ್ನು ಪ್ರಶ್ನಿಸಿ ಸಲ್ಲಿಸಿದ್ದ ಅಪೀಲು ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ನಾವು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಲ್ಲಿಸಿದ್ದೇವೆ. ಎಲ್ಲಿ ಅಪೀಲು ಸಲ್ಲಿಸಿದ್ದೀರಿ? ಎಂದರೆ ನಾವು ಎಲ್ಲೂ ಅಪೀಲು ಸಲ್ಲಿಸಿಸಲಿಲ್ಲ, ಸೀದಾ ಸಿವಿಲ್ ಕೋರ್ಟ್ ಗೆ ಬಂದಿದ್ದೇವೆ. ಅಪೀಲು ಸಲ್ಲಿಸದೇ ಇರುವ ಕಾರಣ ಎಂ.ಆರ್. ನಂ. 54/1997-98 ರ ಆದೇಶ ಅಂತಿಮಗೊಂಡು 1 ರಿಂದ 3 ನೇ ಪ್ರತಿವಾದಿಗಳೇ ಸ್ವಾಧೀನ ಹೊಂದಿದ್ದಾರೆ ಎಂದರೆ ನಾವೇ ಸ್ವಾಧೀನದಲ್ಲಿದ್ದೇವೆ. ಸರ್ವೇ ನಂ. 164/ಇ ಮತ್ತು 159/ಎಫ್ ಇವತ್ತಿಗೂ ಬಾವಿ ಲಿಂಗಪ್ಪನ ಹೆಸರಿನಲ್ಲೇ ಇರುತ್ತವೆ ಎಂದರೆ ಆತ ನಮ್ಮ ಅಜ್ಜನಾದ್ದರಿಂದ ಆತನ ಹೆಸರಿನಲ್ಲೇ ಇರುತ್ತವೆ. ಬಾವಿ ಲಿಂಗಪ್ಪ 1 ರಿಂದ 3 ನೇ ಪ್ರತಿವಾದಿಗಳ ಅಜ್ಜನಾಗಿದ್ದು, ನಮ್ಮ ಅಜ್ಜನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಬಾವಿ ಲಿಂಗಪ್ಪ ಎನ್ನುವವರು ಇಬ್ಬರು. ಗುಡ್ಡಪ್ಪನ ಮಗ ಲಿಂಗಪ್ಪ ಮತ್ತು ದೊಡ್ಡನಿಂಗಪ್ಪನ ಮಗ ಲಿಂಗಪ್ಪ ಇರುತ್ತಾರೆ. ಗುಡ್ಡಪ್ಪನ ಮಗ ಲಿಂಗಪ್ಪನಿಗೂ ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ನಾವು ಬಾವಿ ಲಿಂಗಪ್ಪ ತಂದೆ ಗುಡ್ಡಪ್ಪ ಇವರ ವಂಶಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿ. ನಾವು ಸಾಲುಮನಿ ವಂಶಸ್ಥರು ಎಂದರೆ ಅಲ್ಲ, ಬಾವಿ ವಂಶಸ್ಥರು. ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಬಾವಿ ಲಿಂಗಪ್ಪ ಬಿನ್ ಗುಡ್ಡಪ್ಪ ಎಂಬುದನ್ನು ಬಾವಿ ಲಿಂಗಪ್ಪ ಬಿನ್ ದೊಡ್ಡನಿಂಗಪ್ಪ ಎಂದು ಬದಲಾವಣೆ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದೊಡ್ಡನಿಂಗಪ್ಪನ ಮಗ ಲಿಂಗಪ್ಪ ಯಾವತ್ತೂ ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳು ಮತ್ತು 4 ನೇ ಪ್ರತಿವಾದಿ ಮಿಲಾಪಿಯಾಗಿ 1 ರಿಂದ 3 ನೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ.

8. ಬಾವಿ ನಿಂಗಪ್ಪನ ಮಗ ಬಸಪ್ಪನ ವಾರಸುದಾರರನ್ನು ನಾವು ಈ ದಾವೆಗೆ ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಬಾವಿ ಬಸಪ್ಪ ಮತ್ತು ಬಾವಿ ಗಂಗಮ್ಮ ದಾವೆಯನ್ನು ನೀವೇ ಓಡಾಡಿ ನಡೆಸಿಕೊಳ್ಳಿ, ನಮ್ಮ ಕೈಲೆ ಬರಲು ಆಗುವುದಿಲ್ಲ ಎಂದು ಹೇಳಿದ್ದರು. ಬಸಪ್ಪ ಈಗ ಮೃತಪಟ್ಟಿದ್ದಾನೆ ಎಂದರೆ ಹೌದು, ಗಂಗಮ್ಮ ಬದುಕಿದ್ದಾಳೆ. ಬಾವಿ ನಿಂಗಪ್ಪ ಮತ್ತು ಗಂಗಮ್ಮನಿಗೆ ಮೂರು ಜನ ಗಂಡುಮಕ್ಕಳು ಮತ್ತು ಒಬ್ಬ ಮಗಳು ಇರುತ್ತಾಳೆ. ಅವರೆಲ್ಲರೂ ಈ ದಾವೆಗೆ ಅವಶ್ಯಕ ಪಕ್ಷಕಾರರು ಎಂದರೆ ಸರಿ. ನಮಗೆ 1 ರಿಂದ 3 ನೇ ಪ್ರತಿವಾದಿಗಳ ವಂಶದ ಜೊತೆ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಸಾಲುಮನಿ ನಿಂಗಪ್ಪ ನನಗೆ ಅಣ್ಣನಾಗಬೇಕು. 1 ನೇ ವಾದಿ ಆರೋಗ್ಯವಾಗಿಯೇ ಇದ್ದಾನೆ ಎಂದರೆ ಸರಿ. ಆತ ಸಾಕ್ಷಿ ಹೇಳಿದರೆ ಸತ್ಯ ಹೇಳುತ್ತಾನೆಂಬ ಭಯದಿಂದ ಆತನ ಮುಖ್ಯವಿಚಾರಣೆಯ ನಂತರ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಆತನಿಗೆ ಕಿವಿಗೆ ಪೆಟ್ಟು ಬಿದ್ದು ಕಿವಿ ಕೇಳುವುದಿಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ನಿರಾಕರಿಸಿ ಮುಕ್ತಾಯಗೊಳಿಸಲಾಗಿದೆ).**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**